ಮೈ ಸೂ ರು ವಿ ಧಾ ನ ಸ ಭೆ

MYSORE LEGISLATIVE ASSEMBLY

Tuesday, 20th February 1973/Phalguna 1894 S. E.

The House met in the Assembly Chamber, Vidhana Soudha, at Two of the Clock.

MADAM SPEAKER (Smt. K. S. NAGARATHNAMMA) in the Chair

STARRED QUESTIONS

(to which oral answers were given)

Munsiff-Magistrate Court at Hosanagar

11. Sri S. M. SHEERANALY CHANDRASHEKHAR (Hosanagar).—

Will the Minister for Law and Parliamentary Affairs be pleased to state :—

(*a*) the reasons for delay in the establishment of a Munsiff-Magistrate Court in Hosanagar in spite of the fact that a representation has been made to Government ;

(*b*) whether Government is aware that there are a large number of cases from Hosanagar Taluk pending disposal in Sagar Munsiff-Magistrate Court and Shimoga Additional Civil Judge's Court (Land Acquisition Cases) ;

(*c*) if so, whether Government would establish a Munsiff-Magistrate Court at Hosanagar ?

Sri D. K. NAIKAR (Minister for Law and Parliamentary Affairs).—

(*a*) The matter is under exmination by the High Court of Mysore.

(*b*) No.

(*c*) Does not arise.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ ಮತ್ತು (ಅ) ಪ್ರಶ್ನೆಗೆ ಉತ್ತರವಾಗಿ ಅದು ಹೈಕೋರ್ಟಿನ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಇದು ಒಂದಕ್ಕೊಂದಕ್ಕೆ ದ್ವಂದ್ವವಾಗುವುದಿಲ್ಲವೇ ?

† ಶ್ರೀ ಡಿ. ಕೆ. ನಾಯ್ಕರ್.—ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರ ಸರಿಯಾಗಿದೆ. ಏತಕ್ಕೆಂದರೆ ಅಂಕಿ ಸಂಖ್ಯೆಗಳು ಬಾರದೆ ನಾವು ಯಾವರೀತಿಯಿಂದಲೂ ಅದನ್ನು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—(ಅ) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ನಮಗೆ ಭರವಸೆ ಕಾಣುತ್ತದೆ. (ಇ) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಹೊಸನಗರಕ್ಕೆ ಕೋರ್ಟ್ ಕೊಡುವುದಿಲ್ಲ ಎಂದು ಅರ್ಥವಾಗುತ್ತದೆ. ಆದ್ದರಿಂದ ಈಗ ಹೊಸನಗರಕ್ಕೆ ಕೋರ್ಟ್ ಕೊಡುವುದು ಇದೆಯೇ ಅಥವಾ ಇಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್.—ಹೈಕೋರ್ಟಿನಿಂದ ಈ ಪ್ರಪೋಜಲ್ಸ್ ಬಾರದೆ ಕೋರ್ಟ್ ಕೊಡುವ ವಿಚಾರ ಇದೆ ಅಥವಾ ಇಲ್ಲ ಎಂದು ಹೇಳುವುದಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟಿದೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—(ಅ) ಪ್ರಶ್ನೆಗೆ ಉತ್ತರವಾಗಿ ಈ ವಿಷಯವು ಮೈಸೂರು ರಾಜ್ಯದ ಉಚ್ಚ ನ್ಯಾಯಾಲಯದವರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಆದ್ದರಿಂದ ಎಗ್ಸಾಮಿನ್ ಮಾಡುವುದರಲ್ಲಿ ವರ್ಷಾನುಗಟ್ಟಲೆ ತೆಗೆದುಕೊಂಡರೆ ಹೇಗೆ ? ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ವರ್ಷಾನುಗಟ್ಟಲೇ ತೆಗೆದುಕೊಳ್ಳುವುದಿಲ್ಲ. ರೆಪ್ರೆಜೆಂಟೇಷನ್ ಬಂದಕೂಡಲೇ ಅದನ್ನು ಹೈಕೋರ್ಟಿಗೆ ಫಾರ್ವರ್ಡ್ ಮಾಡುತ್ತೇವೆ. ಹೈಕೋರ್ಟಿನವರು ತಮ್ಮ ಪ್ರೊಸೀಜರ್ ಪ್ರಕಾರ ಸಂಬಂಧಪಟ್ಟ ಡಿಸ್ಟ್ರಿಕ್ಟ್ ಜಡ್ಜ್‌ಗಳಿಂದ ಒಪೀನಿಯನ್ ಕಾಲ್‌ಫಾರ್ ಮಾಡುತ್ತಾರೆ. ಈ ಪ್ರಕಾರ ಇದನ್ನು ಮಾಡಲಾಗುತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ —ಮುನ್ಸೀಫ್ ಮ್ಯಾಜಿಸ್ಟ್ರೇಟರ ಕೋರ್ಟನ್ನು ಪ್ರಾರಂಭ ಮಾಡಬೇಕಾದರೆ ಮೂಲಭೂತವಾಗಿ ಏನೇನು ರೂಪರೇಷೆಗಳು ಇರಬೇಕು ? ಮತ್ತು ತಾಲ್ಲೂಕಿನಲ್ಲಿ ಎಲ್ಲಾ ಸೌಲಭ್ಯಗಳು ಇದ್ದರೂ ಕೂಡ ತಕ್ಷಣ ಕೋರ್ಟನ್ನು ಕೊಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಡಿ. ಕೆ. ನಾಯ್ಕರ್.—ಸಿವಿಲ್ ಕೋರ್ಟ್ ಪ್ರಕಾರ ಮುನ್ಸೀಫ್ ಕೋರ್ಟ್ ಕೊಡುವ ವಿಚಾರದಲ್ಲಿ ಹೈಕೋರ್ಟಿನವರನ್ನು ಕನ್‌ಸಲ್ಟ್ ಮಾಡಬೇಕು. ಒಂದು ಮುನ್ಸೀಫ್ ಕೋರ್ಟ್ ಕೊಡಬೇಕಾದರೆ ಸಾಧಾರಣವಾಗಿ ಒಂದು ವರ್ಷಕ್ಕೆ 300 ಸೂಟ್ಸ್ ಫೈಲ್ ಡಿಸ್‌ಪೋಜ್ ಆಗಬೇಕು. ಒಂದು ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ಕೊಡಬೇಕಾದರೆ ಮಿನಿಮಮ್ 150 ಒರಿಜಿನಲ್ ಸೂಟ್ಸ್, 100 ಐ. ಪಿ. ಸಿ. ಕೇಸಸ್ ಮತ್ತು ಅದರ ಜೊತಗೆ ಬೇರೆ ಕೇಸುಗಳು ಇರಬೇಕು. ಇದಕ್ಕನುಗುಣವಾಗಿದ್ದು ಹೈಕೋರ್ಟಿನವರು ಶಿಫಾರಸ್ಸು ಮಾಡಿದ ಮೇರೆ ಕೋರ್ಟನ್ನು ಕೊಡಲಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ಪ್ರಶ್ನೆ ಹೈಕೋರ್ಟಿನಲ್ಲಿ ಒಂದು ವರ್ಷದಿಂದ ಇದೆ. ಆದ್ದರಿಂದ ಇದನ್ನು ಕೂಡಲೇ ಕಳುಹಿಸುವಂತೆ ಅವರಿಗೆ ಸರ್ಕಾರದವರು ಸೂಚನೆ ಕೊಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ತಮ್ಮ ರೆಪ್ರೆಜೆಂಟೇಷನ್ ಮುನ್ಸಿಪಲ್ ಪ್ರೆಸಿಡೆಂಟರಿಂದ 1972ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ ಬಂತು. ಅದನ್ನು ಹೈಕೋರ್ಟಿಗೆ ಕಳುಹಿಸಿದ್ದೇವೆ. ಇದನ್ನು ಬೇಗ ಕಳುಹಿಸಬೇಕೆಂದು ನಾವು ಮೇಲಿಂದ ಮೇಲೆ ಅವರನ್ನು ರಿಕ್ವೆಸ್ಟ್ ಮಾಡುತ್ತಿದ್ದೇವೆ.

† Indicates that the remarks or speeches have not been revised by the member concerned.